**ಕಥೆ**

# ನೆನೆವುದೆನ್ನ ಮನ



**ಶ್ರೀಧರ ಬಳಗಾರ**

ಕಲೆ: ಮುರಳೀಧರ್ ರಾಥೋಡ್

'ಇಂವ ಯಾರು, ಅಂವ ಯಾರು ಗುರ್ತು ಹಿಡಿ ನೋಡ್ವಾ ಅಂತಿದ್ರಲೊ ನನಗೆ. ಈಗ ನಾನ್ಯಾರು ಹೇಳಿ ನೋಡ್ತೆ' ಎಂದು ಮಂಚದ ಮೇಲೆ ಶೇಡಿ ಗೋಡೆಗೆ ಚಾಚಿದ್ದ ಕತ್ತದ ದಿಂಬಿಗೊರಗಿದ್ದ ಜನಾರ್ದನ ಅವಧಾನಿ ಆವೇಶದಿಂದ ದಿಗ್ಗನೆ ಕುಪ್ಪಳಿಸಿ ಎದ್ದು ಕೂತು ಉಬ್ಬಿದ ನೀಲಿ ನರಗಳ ರಾವುಗಣ್ಣಿನ ಅಗಲ ರೆಪ್ಪೆ ತೆರೆದು ಸವಾಲೆಸೆದು ಎಲ್ಲರನ್ನು ಬೆಚ್ಚಿಬೀಳಿಸಿದ. ಪಣಜಿಯಿಂದ ಬಂದಾಗಿನಿಂದ ಔಷಧಿಯ ಅಮಲಿನ ಮಂಪರಿನಲ್ಲಿ ಮಲಗಿಯೇ ಇರುತ್ತಿದ್ದವನ ನೋಡಲು ಬಂದವರ ಪರಿಚಯ ಹಿಡಿಯಲು ಒತ್ತಾಯಿಸುತ್ತಿದ್ದ ಶ್ರೀಪತಿಗೆ ಆತ್ಮಜಿಜ್ಞಾಸೆಯಂತಿದ್ದ ಅಪ್ಪನ ಪ್ರಶ್ನೆ ಎಂದಿನ ಸಹಜ ವರ್ತನೆಗೆ ಮರಳುತ್ತಿರುವ ಸೂಚನೆಯಂತೆ ಕಂಡರೂ ಅನುಮಾನವಾಯಿತು. ಹಾರಿಹೋದ ನೆನಪನ್ನು ಗೂಡಿಗೆ ಮರಳಿ ತರುವ ನೀಲಿನಕ್ಷೆ ಯೋಜನೆಯನ್ನು ಮಾಸ್ತರು ಮತ್ತು ಗಜಾನನ ಜತೆ ಚರ್ಚಿಸುತ್ತಿದ್ದ ವೇಳೆಯಲ್ಲೇ ಅಪ್ಪನ ಪವಾಡ ಸದೃಶ ಮಾತು ಕೇಳಿ ಶ್ರೀಪತಿ ಜಗಲಿಯಿಂದ ಧಾವಿಸಿ ಬಂದ. ಅಷ್ಟರಲ್ಲೆ ಅವನು ತನ್ನ ವಿಲಕ್ಷಣ ಪ್ರಪಂಚಕ್ಕೆ ವಾಪಸ್ಸಾಗಿದ್ದ. ಮುಸುಕೆಳೆದು ಮಗುವಿನಂತೆ ಹೊರಳಿ ಮಲಗಿದ ಗಂಡನ ಕ್ಷಣದ ಹಿಂದಿನ ಅಪರಿಚಿತವೆನಿಸಿದ ಅಸಹಜ ನೋಟ ಯಮುನಕ್ಕನ ಕಣ್ಣಲ್ಲಿ ವಿಷಾದದ ತೊಟ್ಟಾಗಿ ಉರುಳುತ್ತಿರುವುದನ್ನು ನೋಡಿದ. ಆವಾಹನೆ ಮಾಡಿಕೊಂಡ ಮದುಮಗಳ ವೇಷದಲ್ಲಿ ನಾಚಿದಳು; ಮಗನೆದುರು ಮುಜುಗರವಾಯಿತು. ಅವಳೇನು ಗಂಡನಲ್ಲಿ ಮನ್ಮಥನನ್ನು ಪ್ರತ್ಯಕ್ಷವಾಗಿಸಲು ಪ್ರಚೋದನೆಗೆ ಯತ್ನಿಸಿ ಸಿಕ್ಕಿಬಿದ್ದವಳಾಗಿರಲಿಲ್ಲ. ಆ ಹಳೆಯ ಮಧುರ ಉತ್ಕಟ ಕ್ಷಣವನ್ನು ಮೀಟಿ ನೆನಪಿನ ನಂಟಿಗೆ ಅಂಟಿಸಲು ಮುಂದಾಗಿದ್ದಳಷ್ಟೆ. ಕಟ್ಟೆಮನೆಯ ಹಲವು ದಂಪತಿಗಳ ಮೊದಲ ರತಿರಾತ್ರಿಗೆ ಅವಧಾನಿ ಮಲಗಿದ ಕೋಣೆ ಸಾಕ್ಷಿಯಾಗಿತ್ತು. ಅವಧಾನಿ ಮತ್ತು ಯಮುನಕ್ಕಳ ಮಧುಮಂಚವೂ ಅದೇ ಆಗಿತ್ತು. ಗಂಡನ ಸನಿಹ ಕೂತಿದ್ದ ಅವಳಿಗೆ ದಿಬ್ಬಣದ ಎರಡೂ ಕಡೆಯ ಮುತ್ತೈದೆಯರು ಮೊದಲ ಸಮಾಗಮದ ಕೋಣೆಗೆ ರೇಷ್ಮೆ ಸೀರೆಯ ತನ್ನನ್ನು ಪೋಲಿ ತಮಾಷೆಯಲ್ಲಿ ನಗಿಸಿ, ಅರಿಷಿಣದ ಗಲ್ಲ ಚಿವುಟಿ, ಸಂಕೋಚದಲ್ಲಿ ಕುಗ್ಗಿಸಿ, ಲೋಬಾನದ ಸುವಾಸನೆಯ ಕೋಣೆಯ ಒಳಗೆ ದೂಡಿ ಕದ ಹಾಕಿದ್ದು ನೆನಪಾಯಿತು. ಅಂದು ಮುಡಿಸಿದ್ದ ದುಂಡು ಮಲ್ಲಿಗೆ ಪರಿಮಳ ನಾಸಿಕದಲ್ಲಿ ಸೂಸಿದಂತಾಗಿ, ನುಣ್ಣಗೆ ಕ್ಷೌರ ಮಾಡಿದ, ಬಿಳಿ

